**ಪಿ.ಡಬ್ಲ್ಯೂಃ 01 (ರವಣಪ್ಪ)**

**ದಿನಾಂಕಃ 24.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಎಂ ಎಲ್ ವಿ., 9 ರಿಂದ 11 ನೇ ಪ್ರತಿವಾದಿ ಪರ ವಕೀಲರಿಂದ**

ಸಾಕ್ಷಿಯು ಕನ್ನಡ ಭಾಷೆ ಬರುವುದಿಲ್ಲ ತೆಲುಗು ಭಾಷೆ ಬರುತ್ತದೆ ಎಂದು ಹೇಳಿದ್ದರಿಂದ ಕನ್ನಡ ಮತ್ತು ತೆಲುಗು ಭಾಷೆ ತಿಳಿದಿರುವ ಶ್ರೀ ಎನ್ ಜಿ., ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು.

**ಭಾಷಾ ತರ್ಜುಮೆದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**11.** ಜೋಗಿ ರಾಮಸ್ವಾಮಿ ರವರ ಅಣ್ಣ ತಮ್ಮಂದಿರು ಗೋವಿಂದಪ್ಪನ ಕಡೆಯಿಂದ 9 ಎಕರೆ 34 ಗುಂಟೆ ಜಮೀನನ್ನು ಖರೀದಿಸಿದ್ದು, ಸದರಿ ಜಮೀನಿನ ಪೈಕಿ 1 ಎಕರೆ 39 ಗುಂಟೆ ಜಮೀನನ್ನು ದಿ.19.02.1948 ರಂದು ಗೋವಿಂದಪ್ಪನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಗೋವಿಂದಪ್ಪರವರು ಸದರಿ 1 ಎಕರೆ 39 ಗುಂಟೆ ಜಮೀನನ್ನು 1958 ನೇ ಇಸವಿಯಲ್ಲಿ ಪಟೇಲ್ ರಾಮೇಗೌಡ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ನಂತರ ಪಹಣಿಗಳು, ಮುಟೇಶನ್ ಗಳು ಹಾಗೂ ಆರ್ ಆರ್ ಗಳು ಅವರ ಮಕ್ಕಳ ಹೆಸರುಗಳಲ್ಲಿ ಬರುತ್ತಿವೆ ಎಂದರೆ ಸರಿಯಲ್ಲ.

**12.** ದಿ. 14.03.2023 ರಲ್ಲಿ ನಾಗರಾಜ್ ಹಾಗೂ ಅವರ ಕುಟುಂಬದವರು ಅವರ ಭಾಗಕ್ಕೆ ಬಂದಂತಹ 1 ಎಕರೆ 39 ಗುಂಟೆ ಜಮೀನನ್ನು ಎನ್.ಸುಧಾ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಲಕ್ಷ್ಮಿನಾರಾಯಣ ಹಾಗೂ ಅವರ ಕುಟುಂಬದವರು ಅವರ ಭಾಗಕ್ಕೆ ಬಂದಂತಹ 1 ಎಕರೆ 39 ಗುಂಟೆ ಜಮೀನನ್ನು ಎನ್.ಸುಧಾ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ನಂತರ ನಮ್ಮ ಸ್ವಾಧೀನದಲ್ಲಿ 9 ಎಕರೆ 34 ಗುಂಟೆ ಜಮೀನು ಇರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.

**ಅಸಲು ದಾವಾ ನಂಃ 49/2019**

**ಡಿ.ಡಬ್ಲ್ಯೂಃ 01 (ಭಾರತಿ ಗೌಡ)**

**ದಿನಾಂಕಃ 24.03.2026 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಸಂಖ್ಯೆ 18 ರಿಂದ 20 ರ ಅದೇಶದ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಎಂ ಎಲ್ ವಿ., 9 ರಿಂದ 11 ನೇ ಪ್ರತಿವಾದಿ ಪರ ವಕೀಲರಿಂದ

ದಿ. 19.02.1948 ರ ಕ್ರಯ ಪತ್ರದ ದೃಡಿಕೃತ ನಕಲನ್ನು ನಿಡಿ–97 ಎಂದು, ನಿಡಿ–97 ರ ತರ್ಜುಮೆ ಯನ್ನು ನಿಡಿ–97(ಎ), ಜಮಿನು ಹಕ್ಕಿನ ದಾಖಲೆ ರಿಜಿಸ್ಟರ್ ಪ್ರತಿಗಳನ್ನು ನಿಡಿ–98 ಮತ್ತು 99 ಎಂದು, ಇಂಡೆಕ್ಸ್ ಆಫ್ ಲ್ಯಾಂಡ್ ನ್ನು ನಿಡಿ–100 ಎಂದು ಗುರುತಿಸಲಾಯಿತು.

**ವಾದಿಯವರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.